6



# ಸನ್ನಿವೇಶ ರಚನೆ

130

ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಓಟ ಶರ ಓಲಗ ಹವಳ

ನಮ್ಮೂರ ಮಾರಮ್ಮನ ಜಾತ್ರೆ ಪ್ರತಿ ವರ್ಷ ನಡೆಯುತ್ತದೆ. ಜಾತ್ರೆಯಲ್ಲಿ ಓಲಗದ ನಾದದ ಸಮೇತ ಮಾರಮ್ಮನ ರಥವು ಊರಿನ ಬೀದಿಗಳಲ್ಲಿ ಸಾಗುತ್ತದೆ.

ಈ ಜಾತ್ರೆಯಲ್ಲಿ ಮಕ್ಕಳಿಗೆ ಓಟದ ಸ್ಪರ್ಧೆ ಏರ್ಪಡಿಸಿರುತ್ತಾರೆ. ಜಾತ್ರೆಯಲ್ಲಿ ತಿರುಗುವ ತೊಟ್ಟಿಲು, ಹಲವಾರು ಮನರಂಜನೆಗಳು, ಪುಟ್ಟ ಪುಟ್ಟ ಅಂಗಡಿಗಳಿವೆ. ಕನಕ ಕಮಲರು, ಅವರ ತಂದೆ - ತಾಯಿಯ ಜೊತೆಗೆ ಜಾತ್ರೆಗೆ ಬಂದಿದ್ದಾರೆ. ತಂದೆ, ಕನಕನಿಗೆ ಆಟದ ಬಿಲ್ಲು ಮತ್ತು ಶರವನ್ನು ಕೊಡಿಸಿದರು ಮತ್ತು ಕಮಲಳಿಗೆ ಬಲೂನನ್ನು ಕೊಡಿಸಿದರು.

ಜಾತ್ರೆಯಲ್ಲಿ ಕಮಲಳ ತಾಯಿಗೆ ಅವಳ ಗೆಳತಿ ಭೇಟಿಯಾದರು. ಅವರ ಗೆಳತಿಯ ಹೊಸದಾದ ಹವಳದ ಸರವನ್ನು ನೋಡಿ ಖುಷಿಪಟ್ಟರು.



a



7



## ಸನ್ನಿವೇಶ ರಚನೆ

151

ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

# ಹಣ ಗಣಪ ಐದಳ ಒಣಮರ

ಮಾನು – ಭಾನು ಇಬ್ಬರು ಅವರ ತಂದೆ – ತಾಯಿಯ ಜೊತೆ ಊರಾಚೆ ಇರುವ ಗಣಪನ ಪೂಜೆ ಮಾಡಲು ಬಂದಿದ್ದಾರೆ.

ಮಾನು ಗಣಪನಿಗೆ ನಮಸ್ಕರಿಸುತ್ತಿದ್ದಾನೆ. ಅಪ್ಪ ಹಣವನ್ನು ಹುಂಡಿಗೆ ಹಾಕುತ್ತಿದ್ದಾರೆ. ಭಾನು ಐದಳದ ಹೂವನ್ನು ಬುಟ್ಟಿಯಿಂದ ತೆಗೆದುಕೊಂಡು ಪೂಜೆ ಮಾಡಲು ಹಿಡಿದುಕೊಂಡಿದ್ದಾಳೆ.

ಸಮೀಪದಲ್ಲಿ ಒಂದು ಒಣಮರವಿದೆ. ಮರದ ಮೇಲೆ ಒಂದು ಕಾಗೆ ಇದೆ. ರಾಮು ಬಿದ್ದಿರುವ ಒಣಮರದ ತುಂಡುಗಳನ್ನು ಮನೆಗೆ ತೆಗೆದುಕೊಂಡು ಹೋಗುತ್ತಿದ್ದಾನೆ.



a


ಹುಂಡಿ

8



# ಸನ್ನಿವೇಶ ರಚನೆ

170

ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಬಾಲಕ ತಾತ ದಾರ ವಾನರ

ಇದು ಚಂದು - ಬಿಂದುವಿನ ಮನೆ. ಚಂದುವಿನ ತಾಯಿ ದಾರದಿಂದ ಹೂವನ್ನು ಕಟ್ಟುತ್ತಿದ್ದಾರೆ. ಬಾಲಕ, ಚಂದು ತಾಯಿಗೆ ಹೂವನ್ನು ಜೋಡಿಸುತ್ತಾ ಸಹಾಯ ಮಾಡುತ್ತಿದ್ದಾನೆ.

ಚಂದುವಿನ ತಂದೆ ಬೆಳೆದ ಜೋಳವನ್ನು ಪೇಟೆಯಲ್ಲಿ ಮಾರಲು ಸಿದ್ಧಪಡಿಸುತ್ತಿದ್ದಾರೆ. ತಾತ ಚೀಲವನ್ನು ದಾರದಿಂದ ಹೊಲೆಯುತ್ತಿದ್ದಾರೆ. ಆಳು ರಾಮು ಹೊಲೆದ ಚೀಲವನ್ನು ಗಾಡಿಯಲ್ಲಿ ಹಾಕುತ್ತಿದ್ದಾನೆ.

ಮನೆಯ ಮೇಲೆ ಬಂದ ವಾನರ ಜೋಳವನ್ನು ಕದಿಯಲು ಹೊಂಚು ಹಾಕುತ್ತಿದೆ.



a